**ಕರ್ನಾಟಕ ಸರ್ಕಾರ**

ಜಿ.ವಿ.ಕೆ. ರಾವ್ ಕರ್ನಾಟಕ ಸರ್ಕಾರದ ಸಚಿವಾಲಯ,
ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಧಾನ ಸೌಧ,
ಬೆಂಗಳೂರು, ದಿನಾಂಕ 13ನೇ ಆಗಸ್ಟ್ 1976.

ಕ್ರಮಾಂಕ ಡಿಪಿಎಆರ್‌ಡಿ 68 ಪಿಒಎಲ್ 76

ಪ್ರಿಯಶ್ರೀ,

ವಿಷಯ :- ಕನ್ನಡ ತರಬೇತಿ ಶಿಬಿರಗಳಲ್ಲಿ ಅಧಿಕಾರಿಗಳ ಗೈರುಹಾಜರಿ.

ರಾಜ್ಯಾದ್ಯಂತ ಅನೇಕ ಜಿಲ್ಲೆಗಳಲ್ಲಿ ಅಧಿಕಾರಿಗಳಿಗಾಗಿ ನಡೆಸುತ್ತಿರುವ ಆಡಳಿತ ಕನ್ನಡ ತರಬೇತಿ ಶಿಬಿರಗಳಲ್ಲಿ ಕೆಲವು ಜನ ಅಧಿಕಾರಿಗಳು ಗೈರುಹಾಜರಾಗುತ್ತಿರುವರೆಂದೂ, ಇನ್ನೂ ಕೆಲವರು ತಮ್ಮ ಬದಲಾಗಿ ತಮ್ಮ ಸಹಾಯಕರನ್ನು ಕಳುಹಿಸುತ್ತಿರುವರೆಂದೂ ವರದಿಗಳು ಬಂದಿವೆ. ಇದು ತೀವ್ರವಾಗಿ ಆಕ್ಷೇಪಿಸಬೇಕಾದ ವಿಚಾರವಾಗಿದೆ.

ಇದಲ್ಲದೆ ಅಧಿಕಾರಿಗಳ ಬದಲಾವಣೆಯಿಂದಲೂ ಕಛೇರಿಗಳಲ್ಲಿ ಕನ್ನಡದ ಬಳಕೆಯಲ್ಲಿ ವ್ಯತ್ಯಾಸವಾಗುತ್ತಿರುವುದಾಗಿ ತಿಳಿದು ಬಂದಿದೆ. ಒಮ್ಮೆ ಪ್ರಾರಂಭವಾದ ಕನ್ನಡದ ಬಳಕೆ ಯಾವ ಕಾರಣಕ್ಕಾಗಿಯೂ ಕಡಿಮೆ ಮಾಡಬೇಕಾಗಿಲ್ಲ. ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶಾಲಯದವರು ಅಧಿಕಾರಿಗಳಿಗೆ ಹಾಗು ಸಿಬ್ಬಂದಿಯವರಿಗೆ ಸರಕಾರೀ ವ್ಯವಹಾರದಲ್ಲಿ ಕನ್ನಡ ಬಳಕೆಯ ಬಗ್ಗೆ ಮಾಹಿತಿ ಹಾಗೂ ಆತ್ಮ ವಿಶ್ವಾಸ ಮೂಡಿಸುವ ಉದ್ದೇಶದಿಂದ ತರಬೇತಿ ಯೋಜನೆ ಕಾರ್ಯಗತ ಮಾಡುತ್ತಿರುವ ಕಾರಣ ಇದರಲ್ಲಿ ಅಧಿಕಾರಿಗಳು ಸ್ವತಃ ಭಾಗವಹಿಸಬೇಕೇ ವಿನಹ ಸಹಾಯಕರ ಮೂಲಕ ಅಲ್ಲ. ಒಂದಲ್ಲ ಒಂದು ಶಿಬಿರದಲ್ಲಿ ಸ್ವತಃ ಭಾಗವಹಿಸುವುದು ತೀರ ಅವಶ್ಯಕ.

ಅಧಿಕಾರಿಗಳು ಕನ್ನಡ ಬಳಕೆಯ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸರ್ಕಾರ ಇಚ್ಛಿಸುತ್ತದೆ. ಇಂಥ ಲೋಪಗಳು ಮುಂದುವರಿಯುವುದಾದರೆ ಅಂಥವರ ಬಗ್ಗೆ ಯೋಗ್ಯ ಕ್ರಮ

ತೆಗೆದುಕೊಳ್ಳಬೇಕಾದೀತು. ನೀವು ಸರ್ಕಾರದ ಈ ಆಶಯವನ್ನು ಎಲ್ಲಾ ಇಲಾಖೆಯ ಅಧಿಕಾರಿಗಳ ಗಮನಕ್ಕೂ ಕೂಡಲೇ ತಂದು ಕಾರ್ಯಕ್ರಮದ ಪ್ರಕಾರ ಅಧಿಕಾರಿಗಳು ತಪ್ಪದೇ ಭಾಗವಹಿಸುವಂತೆ ಹಾಗೂ ಕಛೇರಿಗಳಲ್ಲಿ ಕನ್ನಡದ ಬಳಕೆ ಹೆಚ್ಚುವಂತೆ ನೋಡಿಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗುತ್ತದೆ. ಜಿಲ್ಲೆಯಲ್ಲಿ ಕನ್ನಡದ ಬಳಕೆಯ ಪ್ರಗತಿಯ ಬಗ್ಗೆ ನಿಮ್ಮಿಂದ ನಿಯತಕಾಲಿಕ ವರದಿಯನ್ನು ಭಾಷಾ ನಿರ್ದೇಶಕರ ಮುಖಾಂತರ ನಿರೀಕ್ಷಿಸುತ್ತೇನೆ.

ನಿಮ್ಮ ವಿಶ್ವಾಸಿ,
ಸಹಿ/-
**(ಜಿ.ವಿ.ಕೆ. ರಾವ್)**